**All India Radio: Bangalore**
**National Bulletin In Kannada**
**30.11.2025  19.35 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**30.11.2025  19.35 p.m.**
**<><><><>**

ಮುಖ್ಯಾಂಶಗಳು

1. ಮನದ ಮಾತು ಜನರ ಸಾಧನೆಗಳನ್ನು ಸಾರ್ವಜನಿಕರಿಗೆ ತಲುಪಿಸುವ ಅತ್ಯುತ್ತಮ ವೇದಿಕೆ - ಮನ್ ಕಿ ಬಾತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅಭಿಮತ
2. ನಾಳೆಯಿಂದ ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭ ; ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿಂದು ಸರ್ವಪಕ್ಷ ಸಭೆ
3. ಪೊಲೀಸರು ವೃತ್ತಿಪರತೆ, ಸೂಕ್ಷ್ಮತೆ ಮತ್ತು ಸ್ಪಂದಿಸುವಿಕೆಯನ್ನು ಹೆಚ್ಚಿಸಿಕೊಳ್ಳುವಂತೆ ಪ್ರಧಾನಿ ಸೂಚನೆ
4. ರಾಂಚಿ ಏಕದಿನ ಕ್ರಿಕೆಟ್ ಪಂದ್ಯ ; ದಕ್ಷಿಣ ಆಫ್ರಿಕಾಗೆ ೩೫೦ ರನ್‌ಗಳ ಬೃಹತ್ ಗೆಲುವಿನ ಗುರಿ ನೀಡಿದ ಭಾರತ

<><><><>

ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮ ಮನ್ ಕಿ ಬಾತ್‌ನ ೧೨೮ನೇ ಆವೃತ್ತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶ-ವಿದೇಶಗಳಲ್ಲಿರುವ ಭಾರತೀಯರನ್ನುದ್ದೇಶಿಸಿ ಮಾತನಾಡಿದರು. ಅವರು, ಕೆಲವು ದಿನಗಳ ಹಿಂದೆ, ಭಾರತವು ಕಾಮನ್ವೆಲ್ತ್ ಕ್ರೀಡಾಕೂಟವನ್ನು ಆಯೋಜಿಸಲಿದೆ ಎಂದು ಘೋಷಿಸಲಾಯಿತು. ಈ ಸಾಧನೆಗಳು ದೇಶ ಮತ್ತು ದೇಶದ ಪ್ರಜೆಗಳಿಗೆ ಸಲ್ಲತಕ್ಕದ್ದು. 'ಮನದ ಮಾತು' ಜನರ ಅಂತಹ ಸಾಧನೆಗಳನ್ನು, ಜನರ ಸಾಮೂಹಿಕ ಪ್ರಯತ್ನಗಳನ್ನು ಸಾರ್ವಜನಿಕರಿಗೆ ತಲುಪಿಸುವ ಅತ್ಯುತ್ತಮ ವೇದಿಕೆಯಾಗಿದೆ ಎಂದು ಅವರು ಮನ್ ಕಿ ಬಾತ್‌ನಲ್ಲಿ ಉಲ್ಲೇಖಿಸಿದರು. ಹರಿಯಾಣದ ಕುರುಕ್ಷೇತ್ರದಲ್ಲಿ ಮಹಾಭಾರತ ಯುದ್ಧವು ನಡೆದಿತ್ತು ಎಂದು ನಮಗೆಲ್ಲರಿಗೂ ತಿಳಿದಿದೆ. ಆದರೆ ಈಗ ನೀವು ಮಹಾಭಾರತ ಅನುಭವ ಕೇಂದ್ರದಲ್ಲಿ ಈ ಯುದ್ಧದ ಭೀಕರತೆಯನ್ನು ಸಾಕ್ಷಾತ್ ಅನುಭವಿಸಬಹುದು. ಈ ಅನುಭವ ಕೇಂದ್ರದಲ್ಲಿ, ಮಹಾಭಾರತದ ಕಥೆಯನ್ನು ೩ ಆಯಾಮದ ಧ್ವನಿ ಮತ್ತು ಬೆಳಕಿನ ಪ್ರದರ್ಶನದಲ್ಲಿ ಹಾಗೂ ಡಿಜಿಟಲ್ ತಂತ್ರಜ್ಞಾನದ ಮೂಲಕ ಪ್ರದರ್ಶಿಸಲಾಗುತ್ತಿದೆ. ನವೆಂಬರ್ ೨೫ ರಂದು ನಾನು ಕುರುಕ್ಷೇತ್ರಕ್ಕೆ ಭೇಟಿ ನೀಡಿದಾಗ, ಈ 'ಅನುಭವ ಕೇಂದ್ರದ' ಅನುಭವ ನನ್ನಲ್ಲಿ ಸಂತೋಷವನ್ನು ತುಂಬಿತು ಎಂದು ಮನ್ ಕಿ ಬಾತ್‌ನಲ್ಲಿ ತಿಳಿಸಿದ್ದಾರೆ.

**ಧ್ವನಿ : ನರೇಂದ್ರ ಮೋದಿ (ಕುರುಕ್ಷೇತ್ರ  ೨೫ ಸೆಕೆಂಡ್‌ಗಳು)**

ಕುರುಕ್ಷೇತ್ರದ ಬ್ರಹ್ಮ ಸರೋವರದಲ್ಲಿ ಆಯೋಜಿಸಲಾದ ಅಂತಾರಾಷ್ಟ್ರೀಯ ಗೀತಾ ಮಹೋತ್ಸವದಲ್ಲಿ ಭಾಗವಹಿಸಿದ್ದು ಕೂಡಾ ಬಹಳ ವಿಶೇಷವಾಗಿತ್ತು.  ವಿಶ್ವದ ಅತ್ಯಂತ ಹಳೆಯ ಭಾಷೆ ಮತ್ತು ವಿಶ್ವದ ಅತ್ಯಂತ ಹಳೆಯ ನಗರಗಳಲ್ಲಿ ಒಂದಾದ ನಗರದ ಸಂಗಮವು ಎಂದೆಂದಿಗೂ ಅದ್ಭುತ ಅನುಭವವಾಗಿದೆ. ಡಿಸೆಂಬರ್ ೨ ರಂದು ಕಾಶಿಯ ನಮೋ ಘಾಟ್‌ನಲ್ಲಿ ನಾಲ್ಕನೇ ಕಾಶಿ-ತಮಿಳು ಸಂಗಮಮ್  ಪ್ರಾರಂಭವಾಗುತ್ತಿದೆ. ಈ ಬಾರಿಯ

ಕಾಶಿ-ತಮಿಳು ಸಂಗಮದ ವಿಷಯವು ತುಂಬಾ ಆಸಕ್ತಿದಾಯಕವಾಗಿದೆ. ತಮಿಳು ಭಾಷೆಯ ಬಗ್ಗೆ ಒಲವು ಹೊಂದಿರುವ ಎಲ್ಲರಿಗೂ ಕಾಶಿ-ತಮಿಳು ಸಂಗಮವು ಒಂದು ಪ್ರಮುಖ ವೇದಿಕೆಯಾಗಿದೆ. ನಮ್ಮ ನೌಕಾ ಪಡೆ ಬಹಳ ವೇಗದಿಂದ ಆತ್ಮನಿರ್ಭರತೆಯ ನಿಟ್ಟಿನಲ್ಲಿ ಹೆಜ್ಜೆ ಹಾಕುತ್ತಿದೆ ಎನ್ನುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಡಿಸೆಂಬರ್ ೪ ರಂದು ನಾವು ನೌಕಾ ಪಡೆ ದಿನ ಆಚರಿಸಲಿದ್ದೇವೆ. ಈ ಸಂದರ್ಭವು ನಮ್ಮ ಸೈನಿಕರ ಅದಮ್ಯ ಸಾಹಸ ಮತ್ತು ಪರಾಕ್ರಮವನ್ನು ಸನ್ಮಾನಿಸುವ ವಿಶೇಷ ದಿನವಾಗಿದೆ ಎಂದು ಹೇಳಿದರು. ನೌಕಾ ಪಡೆಗೆ ಸಂಬಂಧಿಸಿದ ಪ್ರವಾಸೋದ್ಯಮದಲ್ಲಿ ಆಸಕ್ತಿ ಹೊಂದಿರುವವರಿಗಾಗಿ ನಮ್ಮ ದೇಶದಲ್ಲಿ ಬಹಳಷ್ಟು ಸ್ಥಳಗಳಿವೆ, ಅಲ್ಲಿಗೆ ಹೋದಲ್ಲಿ ಅವರಿಗೆ ಕಲಿಯಲು ಬಹಳಷ್ಟು ವಿಷಯಗಳು ದೊರೆಯುತ್ತವೆ. ದೇಶದ ಪಶ್ಚಿಮ ತೀರದಲ್ಲಿ ಗುಜರಾತ್ ನ ಸೋಮನಾಥ್ ಸಮೀಪದ ದೀವ್‌ನಲ್ಲಿ 'ಐಎನ್‌ಎಸ್ ಖುಕ್ರೀ' ಗೆ ಸಮರ್ಪಿತ 'ಖುಕ್ರೀ ಸ್ಮಾರಕ ಮತ್ತು ಸಂಗ್ರಹಾಲಯ' ಇದೆ. ಗೋವಾದಲ್ಲಿ, 'ನೌಕಾ ವಿಮಾನಯಾನ ಸಂಗ್ರಹಾಲಯ' ಇದ್ದು, ಏಷ್ಯಾದಲ್ಲಿ ಈ ರೀತಿಯ ವಿಶಿಷ್ಟ ಸಂಗ್ರಹಾಲಯ ಎನಿಸಿದೆ. ಫೋರ್ಟ್ ಕೊಚ್ಚಿಯ ಐಎನ್‌ಎಸ್ ದ್ರೋಣಾಚಾರ್ಯದಲ್ಲಿ 'ಭಾರತೀಯ ನೌಕಾ ಕಡಲ ಸಂಗ್ರಹಾಲಯ ಇದೆ. ಇಲ್ಲಿ ನಮ್ಮ ದೇಶದ ಕಡಲ ಇತಿಹಾಸ ಮತ್ತು ಭಾರತೀಯ ನೌಕಾ ಪಡೆಯ ವಿಕಾಸವನ್ನು ಕಾಣಬಹುದು. ಈ ಹಿಂದೆ ಫೋರ್ಟ್ ಬ್ಲೇರ್ ಎಂದು ಕರೆಯಲಾಗುತ್ತಿದ್ದ ಶ್ರೀವಿಜಯಪುರಂನಲ್ಲಿ 'ಸಾಮುದ್ರಿಕಾ - ನೌಕಾ ಕಡಲ ಸಂಗ್ರಾಹಲಯ' ಇದೆ. ಇದು ಆ ಪ್ರದೇಶದ ಶ್ರೀಮಂತ ಇತಿಹಾಸವನ್ನು ಪ್ರದರ್ಶಿಸಲು ಹೆಸರುವಾಸಿಯಾಗಿದೆ. ಕಾರವಾರದ ರವೀಂದ್ರನಾಥ ಟ್ಯಾಗೋರ್ ಕಡಲತೀರದ ಯುದ್ಧ ನೌಕೆ ವಸ್ತುಸಂಗ್ರಹಾಲಯದಲ್ಲಿ ಕ್ಷಿಪಣಿಗಳು ಮತ್ತು ಶಸ್ತ್ರಾಸ್ತ್ರಗಳ ಪ್ರತಿಕೃತಿಗಳನ್ನು ಇರಿಸಲಾಗಿದೆ. ವಿಶಾಖಪಟ್ಟಣಂನಲ್ಲಿ ಭಾರತೀಯ ನೌಕಾ ಪಡೆಗೆ ಸಂಬಂಧಿಸಿದ ಜಲಾಂತರ್ಗಾಮಿ, ಹೆಲಿಕಾಪ್ಟರ್ ಮತ್ತು ವಿಮಾನ ವಸ್ತುಸಂಗ್ರಹಾಲಯವಿದೆ ಎಂದು ಅವರು ತಿಳಿಸಿದರು. ನಮ್ಮ ದೇಶದಲ್ಲಿ ಕೂಡಾ ಚಳಿಗಾಲದ ಪ್ರವಾಸೋದ್ಯಮ ಬಹಳ ಸಾಮರ್ಥ್ಯ ಹೊಂದಿದೆ ನಮ್ಮ ದೇಶದಲ್ಲಿ ಪರ್ವತಗಳೂ ಇವೆ. ಸಂಸ್ಕೃತಿಯೂ ಇದೆ ಮತ್ತು ಸಾಹಸದ ಅತ್ಯಂತ ಸಾಧ್ಯತೆಗಳು ಕೂಡಾ ಇವೆ. ಇತ್ತೀಚೆಗೆ ಉತ್ತರಾಖಂಡ್‌ನ ಚಳಿಗಾಲದ ಪ್ರವಾಸೋದ್ಯಮ ಜನರನ್ನು ಬಹಳವಾಗಿ ಆಕರ್ಷಿಸುತ್ತಿದೆ. ಕೆಲವೇ ವಾರಗಳಲ್ಲಿ ಉತ್ತರಾಖಂಡ್‌ನಲ್ಲಿ ಚಳಿಗಾಲದ ಕ್ರೀಡಾಕೂಟ ಆಯೋಜನೆಯಾಗಬೇಕಿದೆ. ದೇಶಾದ್ಯಂತ ಕ್ರೀಡಾಪಟುಗಳು, ಸಾಹಸ ಪ್ರೇಮಿಗಳು ಮತ್ತು ಕ್ರೀಡೆಗಳೊಂದಿಗೆ ತೊಡಗಿಸಿಕೊಂಡಿರುವವರು ಈ ಆಯೋಜನೆಯ ಕುರಿತು ಬಹಳ ಉತ್ಸುಕರಾಗಿದ್ದಾರೆ ಎಂದು ಅವರು ತಮ್ಮ ಮನ್ ಕಿ ಬಾತ್‌ನಲ್ಲಿ ವಿವರಿಸಿದರು.

**ಧ್ವನಿ : ನರೇಂದ್ರ ಮೋದಿ (ಪ್ರವಾಸೋದ್ಯಮ ೩೪ ಸೆಕೆಂಡ್‌ಗಳು)**

<><><><>

ನಾಳೆಯಿಂದ ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭವಾಗಲಿದೆ. ಡಿಸೆಂಬರ್ ೧೯ರವರೆಗೆ ಅಧಿವೇಶನ ನಡೆಯಲಿದೆ. ಈ ಹಿನ್ನೆಲೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ಸಂಸತ್ ಭವನದಲ್ಲಿ ಇಂದು ಸರ್ವಪಕ್ಷ ಸಭೆ ನಡೆಯಿತು. ಸಭೆಯ ಬಳಿಕ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು,

ಅಧಿವೇಶನದಲ್ಲಿ ಉಭಯ ಸದನಗಳ ಕಾರ್ಯ ಕಲಾಪವನ್ನು ಸುಗಮವಾಗಿ ನಿರ್ವಹಿಸಲು ಎಲ್ಲ ರಾಜಕೀಯ ಪಕ್ಷಗಳ ನಾಯಕರಿಗೆ ಸಹಕಾರ ನೀಡುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

**ಧ್ವನಿ : ಕಿರಣ್ ರಿಜಿಜು (೨೧ ಸೆಕೆಂಡ್‌ಗಳು)**

ಸಭೆಯಲ್ಲಿ ರಾಜ್ಯಸಭೆಯ ಸದನದ ನಾಯಕ ಜೆ.ಪಿ. ನಡ್ಡಾ, ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘ್ವಾಲ್ ಮತ್ತು ಡಾ. ಎಲ್. ಮುರುಗನ್ ಉಪಸ್ಥಿತರಿದ್ದರು. ಕಾಂಗ್ರೆಸ್ ನಾಯಕ ಗೌರವ್ ಗೊಗೊಯ್, ಡಿಎಂಕೆ ನಾಯಕ ತಿರುಚಿ ಶಿವ, ಟಿಎಂಸಿ ನಾಯಲ ಡೆರಿಕ್ ಒ. ಬ್ರಿಯಾನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

<><><><>

ವೃತ್ತಿಪರತೆ, ಸೂಕ್ಷ್ಮತೆ ಮತ್ತು ಸ್ಪಂದಿಸುವಿಕೆಯನ್ನು ಹೆಚ್ಚಿಸುವ ಮೂಲಕ ಪೊಲೀಸರ ಬಗ್ಗೆ, ವಿಶೇಷವಾಗಿ ಯುವಕರಲ್ಲಿ ಸಾರ್ವಜನಿಕ ಗ್ರಹಿಕೆಯನ್ನು ಪರಿವರ್ತಿಸುವ ತುರ್ತು ಅಗತ್ಯವನ್ನು ಪ್ರಧಾನಿ ನರೇಂದ್ರ ಮೋದಿ ಒತ್ತಿ ಹೇಳಿದ್ದಾರೆ. ರಾಯ್‌ಪುರದಲ್ಲಿ ಇಂದು ನಡೆದ ೬೦ನೇ ಅಖಿಲ ಭಾರತ ಪೊಲೀಸ್ ಮಹಾನಿರ್ದೇಶಕರು, ಮಹಾ ನಿರೀಕ್ಷಕರ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಅವರು, ಪೊಲೀಸ್ ತನಿಖೆಗಳಲ್ಲಿ ವಿಧಿವಿಜ್ಞಾನದ ಬಳಕೆಯ ಕುರಿತು ಪ್ರಕರಣ ಅಧ್ಯಯನಗಳನ್ನು ಕೈಗೊಳ್ಳಲು ವಿಶ್ವವಿದ್ಯಾಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಪ್ರೋತ್ಸಾಹಿಸಲು ಅವರು ಕರೆ ನೀಡಿದರು. ವರ್ಧಿತ ವಿಧಿವಿಜ್ಞಾನ ಅನ್ವಯವು ಅಪರಾಧ ನ್ಯಾಯ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಹೇಳಿದರು. ನಿಷೇಧಿತ ಸಂಘಟನೆಗಳ ನಿಯಮಿತ ಮೇಲ್ವಿಚಾರಣೆಗಾಗಿ ಕಾರ್ಯವಿಧಾನಗಳನ್ನು ಸ್ಥಾಪಿಸುವ ಮಹತ್ವವನ್ನು ವಿವರಿಸಿದ ಪ್ರಧಾನಿ, ಎಡಪಂಥೀಯ ಉಗ್ರವಾದದಿಂದ ಮುಕ್ತವಾದ ಪ್ರದೇಶಗಳ ಸಮಗ್ರ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಕರಾವಳಿ ಭದ್ರತೆಯನ್ನು ಬಲಪಡಿಸಲು ನವೀನ ಮಾದರಿಗಳನ್ನು ಅಳವಡಿಸಿಕೊಳ್ಳಬೇಕು. ಮಾದಕ ದ್ರವ್ಯ ದುರುಪಯೋಗವನ್ನು ನಿಭಾಯಿಸಲು ಜಾರಿ, ಪುನರ್ವಸತಿ ಮತ್ತು ಸಮುದಾಯ ಮಟ್ಟದ ಪ್ರಯತ್ನಕ್ಕೆ ಸಂಪೂರ್ಣ ಸರ್ಕಾರದ ವಿಧಾನದ ಅಗತ್ಯವಿದೆ ಎಂದು ಪ್ರಧಾನಿ ತಿಳಿಸಿದ್ದಾರೆ. 'ವಿಕಸಿತ ಭಾರತ : ಭದ್ರತಾ ಆಯಾಮಗಳು' ಎಂಬ ವಿಷಯ ವಾಕ್ಯವಿರುವ ಈ ಸಮ್ಮೇಳನದಲ್ಲಿ, ರಾಷ್ಟ್ರೀಯ ಭದ್ರತಾ ವಿಷಯಗಳ ವ್ಯಾಪಕ ಶ್ರೇಣಿಯ ಕುರಿತು ಚರ್ಚೆಗಳು ನಡೆದವು.

<><><><>

ರಾಂಚಿಯಲ್ಲಿ ನಡೆಯುತ್ತಿರುವ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಸರಣಿಯ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ, ದಕ್ಷಿಣ ಆಫ್ರಿಕಾಗೆ ೩೫೦ ರನ್‌ಗಳ ಬೃಹತ್ ಮೊತ್ತದ ಗುರಿ ನೀಡಿದೆ. ಇತ್ತೀಚಿನ ವರದಿ ಬಂದಾಗ ದಕ್ಷಿಣ ಆಫ್ರಿಕಾ ೨೧ ಓವರ್‌ಗಳಲ್ಲಿ ೪ ವಿಕೆಟ್ ನಷ್ಟಕ್ಕೆ ೧೩೦ ರನ್ ಗಳಿಸಿ ಆಡುತ್ತಿದೆ. ವಿರಾಟ್ ಕೊಹ್ಲಿ, ಈ ಪಂದ್ಯದಲ್ಲಿ ೫೨ನೇ ಏಕದಿನ ಶತಕ ದಾಖಲಿಸಿ ಅದ್ಭುತ ಪ್ರದರ್ಶನ ನೀಡಿದ್ದಾರೆ. ರೋಹಿತ್ ಶರ್ಮ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಆಟಗಾರರ ಪಟ್ಟಿಯಲ್ಲಿ ಪಾಕಿಸ್ತಾನದ ಶಾಹೀದ್ ಅಫ್ರಿದಿ ದಾಖಲೆಯನ್ನು ಮುರಿದಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>